ಓಎಸ್ ನಂಃ 134/2017 ಪಿಡಬ್ಲ್ಯೂ- 2

ದಿನಾಂಕಃ 23.11.2023 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಮಾಡಿಸಲಾಯಿತು.

## ಪಾಟೀಸವಾಲುಃ ಪ್ರತಿವಾದಿಯ ಪರ ಶ್ರೀ ಕೆ.ಎನ್.ಎನ್ ವಕೀಲರಿಂದಃ

ನೀವು ಲಕ್ಷ್ಮಮ್ಮ, ಪುಟ್ಟಲಕ್ಷ್ಮಮ್ಮ ಸ್ನೇಹಿತರು ಎಂದರೆ ಸಾಕ್ಷಿಯು ಸಂಬಧಿಕರು ಎನ್ನುತ್ತಾರೆ. ನಿಮ್ಮ ಗ್ರಾಮದಿಂದ ವಾದಿಯ ಗ್ರಾಮಕ್ಕೆ 3 ಕಿ.ಮೀ ಎಂದರೆ 2 ಕಿ.ಮೀ ಆಗುತ್ತದೆ ಎನ್ನುತ್ತಾರೆ. ಕರಾರು ಪತ್ರ ಆಗುವ ಮುನ್ನ ನೀವು ವ್ಯವಹಾರಕ್ಕೆ ಇರಲಿಲ್ಲ ಎಂರದೆ ಇದ್ದೆ ಎನ್ನುತ್ತಾರೆ. ನಿಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಕರಾರು ನಡೆದಾಗ ಇದ್ದೆ ಎಂದು ಬರೆಸಿಲ್ಲ ಎಂದರೆ ಇಲ್ಲ ಎನ್ನುತ್ತಾರೆ. ದಾವಾ ಆಸ್ತಿ ಪ್ರತಿವಾದಿಯ ಪಿತ್ರಾರ್ಜಿ ತ ಆಸ್ತಿ ಎಂದರೆ ಸರಿ . ಅವರಿಗೆ ಒಬ್ಬ ಮಗ ಮಂಜೇಗೌಡ ಇರುತ್ತಾನೆ ಎಂದರೆ ಸರಿ . ಸದರಿ ಕರಾರು ನಡೆಯುವಾಗ ಪ್ರತಿವಾದಿ ಮಗ ಇರಲಿಲ್ಲ ಎಂದರೆ ಸರಿ . 1 ಗುಂಟೆ ಅಥವಾ ಒಂದು ಕಾಲು ಗುಂಟೆ ಆಸ್ತಿ ಉಪ ನೋಂದನಾಧಿಕಾರಿಯವರ ಕಚೇರಿಯಲ್ಲಿ ಆಗಿರುವುದಿಲ್ಲ ಎಂದರೆ ಸಾಕ್ಷಿ ಆವಾಗ ಆಗಿತ್ತು ಈಗ ಆಗುವುದಿಲ್ಲ ಎನ್ನುತ್ತಾರೆ. ದಾವಾ ಆಸ್ತಿ ದಾಖಲಾತಿಯನ್ನು ನೀವು ಖುದ್ದಾಗಿ ಪರಿಶೀಲನೆ ಮಾಡಿರುವುದಿಲ್ಲ ಎಂದರೆ ಇಲ್ಲ ಎನ್ನುತ್ತಾರೆ. ನಿಪಿ 2 ಯಾವಾಗ ಬರೆದಿರುತ್ತಾರೆ ಎಂದರೆ ಸಾಕ್ಷಿಯು ಮಧ್ಯಾಹ್ನ 12-1 ಗಂಟೆಗೆ ಬರೆದಿರುತ್ತಾರೆ ಎನ್ನುತ್ತಾರೆ. ಪತ್ರ ಬರೆದಿದ್ದ ದಿನ ಪ್ರತಿವಾದಿಯು ವ್ಯಾಪಾರ ಮುಗಿಸಬೇಕು ಎಂದು ಹೇಳಿರುತ್ತಾರೆ ಮತ್ತು ನನ್ನನ್ನು ಕರೆದಿರುತ್ತಾರೆ ಹಾಗೂ ನಾನು ಪಹಣಿಯನ್ನು ಪಡೆದುಕೊಂಡು ಬರುತ್ತೇನೆ ಎಂದು 10 ನಿಮಿಷ ನಂತರ ಬಂದಿರುತ್ತೇನೆ. ಊರಲ್ಲಿ ವ್ಯಾಪಾರ ಆದ ದಿನ ನೀವು ವ್ಯವಹಾರಕ್ಕೆ ಸೇರಿರಲಿಲ್ಲ ಎಂದರೆ ಇಲ್ಲ ಎನ್ನುತ್ತಾರೆ. ಬಡ್ಡಿ ಗೆ ಎಂದು ಹಣ ಪಡೆದುಕೊಂಡು ನಿಪಿ 2

ರಂತೆ ಸುಳ್ಳು ಕ್ರಯ ಪತ್ರವನ್ನು ಬರೆಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ವಾದಿಗೆ ಸಹಾಯ ಮಾಡಲು ನಿಪಿ 2 ರಂತೆ ಕ್ರಯಪತ್ರ ಆಗಿಲ್ಲದಿದ್ದರೂ ಸುಳ್ಳು ಹೇಳುತ್ತಿದ್ದಿರಿ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಅನುಸಾರವಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಸಾ ಓ ಹೇ ಕೇ ಸ ಅದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾ.
ದಂಡಾಧಿಕಾರಿಗಳು, ಕೃಷ್ಣರಾಜಪೇಟೆ